ಸೊರಬ ತಾಲ್ಲೂಕಿನ ಗುಡುವಿ ಪಕ್ಷಿಧಾಮ ಅಭಿವೃದ್ಧಿ

2176 - ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಸೊರಬ ತಾಲ್ಲೂಕಿನ ಗುಡವಿ ಪಕ್ಷಿಧಾಮದ ವೀಕ್ಷಣೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಬರುತ್ತಿರುವುದರಿಂದ ಸಾರ್ವಜನಿಕರು ಮತ್ತು ಪಕ್ಷಿಧಾಮದ ಅಭಿವೃದ್ಧಿಯ ಹಿತದೃಷ್ಟಿಯಿಂದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆಯೇ?*

2) *ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?*

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ಹೌದು

ಆ) ಕೆರೆಗಳ ಹೂಳೆತ್ತುವುದು, ಗುಡವಿ ಪಕ್ಷಿಧಾಮದ ಸುತ್ತ ಮುಳ್ಳು ಬೇಲಿ ತಂತಿ ಹಾಕುವುದು, ರಸ್ತೆ ನಿರ್ಮಾಣ ಮಾಡುವುದು ಮಕ್ಕಳ ಉದ್ಯಾನವನ ಮಾಡುವುದು ಹಣ್ಣುಹಂಪಲು ಬಿಡುವ ಗಿಡಗಳನ್ನು ಬೆಳೆಸುವುದು, ಸೇತುವೆ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ನಿರ್ಮಲ ಕರ್ನಾಟಕ ಯೋಜನೆ ಕುರಿತು

2177 - ಶ್ರೀಮತಿ ಬಿ. ಟಿ. ಲಲಿತಾನಾಯಕ್ (ದೇವದುರ್ಗ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಿರ್ಮಲ ಕರ್ನಾಟಕ ಕಾರ್ಯಕ್ರಮವು ಹೆಚ್ಚಿನ ಗ್ರಾಮಗಳಲ್ಲಿ ಯಶಸ್ವಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ಯೋಜನೆ ಯಶಸ್ವಿಯಾಗಲು ಸರ್ಕಾರವು ಕೈಗೊಂಡಿರುವ ಕ್ರಮದ ಬಗ್ಗೆ ವಿವರಣೆ ನೀಡುವುದು.*

ಇ) *ದೇವದುರ್ಗ ತಾಲ್ಲೂಕಿಗೆ ಈ ಯೋಜನೆಗಾಗಿ ಬಿಡುಗಡೆಯಾದ ಹಣವೆಷ್ಟು?*

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ಇಲ್ಲ. ನಿರ್ಮಲ ಕರ್ನಾಟಕ ಕಾರ್ಯಕ್ರಮ ಯಶಸ್ವಿಯಾಗಿ ಅನುಷ್ಠಾನವಾಗುತ್ತಿದೆ.

ಆ) - ಉದ್ಭವಿಸುವುದಿಲ್ಲ -

ಇ) ಈ ಯೋಜನೆಯನ್ನು ಪ್ರಾರಂಭ ಮಾಡಿರುವುದರಿಂದ ಇಂದಿನವರೆಗೆ ರೂ. 9,60,750.00ಗಳನ್ನು ದೇವದುರ್ಗ ತಾಲ್ಲೂಕಿಗೆ ಬಿಡುಗಡೆ ಮಾಡಲಾಗಿದೆ.